Ex.No.32/2024

<u>ಮಧ್ಯಂತರ ಅರ್ಜಿ ಸಂಖ್ಯೆ.**1** ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ **21** ನಿಯಮ **29** ಸಹವಾಚಕ **151** ರಡಿ ಅರ್ಜಿ</u>

ಅರ್ಜಿದಾರರು ಈ ಮೇಲ್ಕಂಡ ಅರ್ಜಿಯೊಂದಿಗೆ ಲಗತ್ತಿಸಿರುವ ಪ್ರಮಾಣ ಪತ್ರದಲ್ಲಿ ಹೇಳಿರುವ ಕಾರಣಗಳಿಂದಾಗಿ ಅರ್ಜಿದಾರರು/ತೀರ್ಪುಋಣಿದಾರರು ಸದರಿ ಅರ್ಜಿಯಲ್ಲಿ ತಿಳಿಸಿರುವಂತೆ ಆರ್.ಎ.ಸಂಖ್ಯೆ:85/202 ರ ಅಪೀಲು ಇತ್ಯರ್ಥವಾಗುವವರೆಗೂ ಅಮಲ್ಜಾರಿ ಸಂಖ್ಯೆ.32/2024 ನ್ನು ತಡೆ ಹಿಡಿಯಬೇಕೆಂದು ಕೇಳಿಕೊಂಡಿರುತ್ತಾರೆ.

2. ಅರ್ಜಿದಾರರು ತಮ್ಮ ಪ್ರಮಾಣ ಪತ್ರದಲ್ಲಿ ಹೇಳುವುದೇನೆಂದರೆ ಇದೇ ನ್ಯಾಯಾಲಯವು ಆದೇಶಿಸಿರುವ ಅಸಲು ದಾವ ಸಂಖ್ಯೆ:264/2015 ರ ತೀರ್ಪು ಮತ್ತು ಡಿಕ್ರಿಯ ವಿರುದ್ಧ ಮಾನ್ಯ 3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಆರ್.ಎ ಸಂಖ್ಯೆ:85/2023 ರಂತೆ ಅಪೀಲು ಸಲ್ಲಿಸಿದ್ದು, ಸದರಿ ಅಪೀಲಿನಲ್ಲಿ ಈ ಪ್ರಕರಣದ ಡಿಕ್ರಿದಾರರು ಪ್ರತಿಅರ್ಜಿದಾರರಾಗಿದ್ದು, ಸದರಿ ಅಪೀಲಿಗೆ ಈ ಪ್ರಕರಣದ ಡಿಕ್ರಿದಾರರು ಅಪೀಲು ನ್ಯಾಯಾಲಯಕ್ಕೆ ವಕೀಲರ ಮೂಲಕ ಹಾಜರಾಗಿದ್ದು ಹಾಗೂ ಸದರಿ ಅಪೀಲಿಗೆ ಆಕ್ಷೇಪಣೆ ಸಲ್ಲಿಸಿರುತ್ತಾರೆ. ಮುಂದುವರೆದು ಮಾನ್ಯ ಅಪೀಲು ನ್ಯಾಯಾಲಯದಲ್ಲಿ ಈ ಪ್ರಕರಣದ ತೀಪು ಋಣಿದಾರರು ಈ ನ್ಯಾಯಾಲಯವು ಅಸಲು ದಾವ ಸಂಖ್ಯೆ 264/2015 ರ ತೀರ್ಪನ್ನು ತಡೆ ಹಿಡಿಯುವಂತೆ ಕೋರಿ ಕ್ರಮಾದೇಶ 41 ನಿಯಮ 5 ರಂತೆ ಅರ್ಜಿ ಸಲ್ಲಿಸಿದ್ದು ಮಾನ್ಯ ಅಪೀಲು ನ್ಯಾಯಾಲಯವು ಸದರಿ ಅರ್ಜಿಯ ಮೇಲೆ ಮತ್ತು ಸದರಿ ಅಪೀಲಿನ ಮುಖ್ಯ ವಾದ ಮಂಡನೆಗಾಗಿ ದಿನಾಂಕ 03/08/2024 ಕ್ಕೆ ಮುಂದೂಡಿರುತ್ತದೆ.

3. ಮುಂದುವರೆದು ಹೀಗಿರುವಲ್ಲಿ ಸದರಿ ಪ್ರಕರಣದ ಉಭಯಪಕ್ಷಗಾರರು ಹಾಗೂ ಅಪೀಲು ನ್ಯಾಯಾಲಯದ ಆರ್.ಎ.ಸಂಖ್ಯೆ:85/2023 ರ ಉಭಯ ಪಕ್ಷಗಾರರು ಒಂದೇ ಆಗಿದ್ದು ಹಾಗೂ ಸದರಿ ಅಸಲು ದಾವ ಸಂಖ್ಯೆ: 264/2015 ರ ತೀರ್ಪಿನ ವಿರುದ್ಧ ಅಪೀಲು ಇರುವುದರಿಂದ ಈ ಕಾರಣಕ್ಕಾಗಿ ಈ ಅಮಲ್ದಾರಿ ಪ್ರಕರಣವನದನು ಆರ್.ಎ.ಸಂಖ್ಯೆ 85/2023 ರ ಅಪೀಲು ಇತ್ಯರ್ಥವಾಗುವವರೆಗೂ, ಈ ಅಮಲ್ದಾರಿ ಪ್ರಕರಣವನ್ನು ತಡೆಹಿಡಿಯಬೇಕೆಂದು ಕೋರಿ ಈ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಮುಂದುವರೆದು ಅರ್ಜಿದಾರರು ಹೇಳುವುದೇನೆಂದರ, ಈ ಅರ್ಜಿಯನ್ನು ಪುರಸ್ಕರಿಸಿದರೆ, ಡಿಕ್ರಿದಾರರಿಗೆ ಯಾವುದೇ ರೀತಿಯ ಕಷ್ಟ-ನಷ್ಟ ಉಂಟಾಗುವುದಿಲ್ಲ, ಒಂದು ವೇಳೆ ಸದರಿ ಅರ್ಜಿಯನ್ನು ತಿರಸ್ಕರಿಸಿದರೆ, ಅರ್ಜಿದಾರರಿಗೆ ತುಂಬಲಾರದ ಕಷ್ಟ-ನಷ್ಟ ಉಂಟಾಗುತ್ತದೆ. ಆದ್ದರಿಂದ ಸದರಿ ಅರ್ಜಿಯನ್ನು ಪುರಸ್ಕರಿಸಬೇಕೆಂದು ಕೇಳಿಕೊಂಡಿರುತ್ತಾರೆ.

3. ಸದರಿ ಮೇಲ್ಕಂಡ ಅರ್ಜಿಗೆ ಡಿಕ್ರಿದಾರರು ತಕರಾರನ್ನು ಸಲ್ಲಿಸಿದ್ದು, ಸದರಿ ತಕರಾರಿನಲ್ಲಿ

ಅರ್ಜಿದಾರರು ಸಲ್ಲಿಸಿರುವ ಅರ್ಜಿಯು ಮೇಲುನೋಟಕ್ಕೆ ಊರ್ಜಿತವಾಗತಕ್ಕದ್ದಲ್ಲ ಮತ್ತು ಸದರಿ ಈ ಅಮಲ್ಜಾರಿ ಪ್ರಕರಣದ ಅಸಲು ದಾವಾ ಸಂಖ್ಯೆ:264/2015 ರ ತೀರ್ಪು ಮತ್ತು ಡಿಕ್ಕಿಯು ದಿನಾಂಕ: 28.11.2023 ರಂದು ಆದೇಶವಾಗಿದ್ದು, ಈ ಆದೇಶದ ವಿರುದ್ಧ ತೀರ್ಪು ಋಣಿದಾರರು ರಾಮನಗರ 3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಆರ್.ಎ.ಸಂಖ್ಯೆ: 85/2023 ರಂತೆ ಅಪೀಲು ಸಲ್ಲಿಸಿದ್ದು. ಸದರಿ ಪ್ರಕರಣದ ಡಿಕ್ರಿದಾರರು ಪ್ರತಿಅರ್ಜಿದಾರರಾಗಿ ಹಾಜರಾಗಿದ್ದು, ಸದರಿ ತೀರ್ಪು ಋಣಿದಾರರು ಸದರಿ ಅಪೀಲಿನಲ್ಲಿ ಈ ನ್ಯಾಯಾಲಯದ ಅಸಲು ದಾವಾ ಸಂಖ್ಯೆ:264/2015 ರ ತೀರ್ಪು ಮತ್ತು ಡಿಕ್ರಿಯನ್ನು ತಡೆಹಿಡಿಯುವಂತೆ ಕೋರಿ ಕ್ರಮಾದೇಶ 41 ನಿಯಮ 5 ರಂತೆ ಅರ್ಜಿ ಸಲ್ಲಿಸಿದ್ದು, ಸದರಿ ಅರ್ಜಿಗೂ ಸಹ ಈ ಪ್ರಕರಣದ ಡಿಕ್ರಿದಾರಕರು ಆಕ್ಷೇಪಣೆ ಸಲ್ಲಿಸಿದ್ದು, ಸದರಿ ಅಪೀಲು ಈಗ ಕ್ರಮಾದೇಶ 41 ನಿಯಮ 5 ರ ಅರ್ಜಿಯ ಮೇಲೆ ಸುನಾವಣೆಗಾಗಿ ಹಾಗೂ ಇದರೊಂದಿಗೆ ಮುಖ್ಯ ಅಪೀಲನ್ನು ಸಹ ವಾದ ಮಂಡನೆ ಮಾಡಲು ಅಪೀಲು ನ್ಯಾಯಾಲಯವು ಉಭಯಪಕ್ಷಕಾರರ ವಕೀಲರಿಗೆ ತಿಳಿಸಿದ್ದು, ಈಗ ಸದರಿ ಅಪೀಲಿನಲ್ಲಿ ಈ ನ್ಯಾಯಾಲಯದ ಅಸಲು ದಾವಾ ಸಂಖ್ಯೆ: 264/2015 ರ ಕಡತವನ್ನು ಅಪೀಲು ನ್ಯಾಯಾಲಯಕ್ಕೆ ಕಳುಹಿಸುವಂತೆ ಈ ನ್ಯಾಯಾಲಯಕ್ಕೆ ಆದೇಶಿಸಿದ್ದು. ಈಗ ಸದರಿ ಅಪೀಲು ದಿನಾಂಕ:22.06.2024 ಕ್ಕೆ ಇರುತ್ತದೆ ಹಾಗೂ ಈ ಪ್ರಕರಣದ ಡಿಕ್ರಿದಾರರು ಅಪೀಲು ನ್ಯಾಯಾಲಯದಲ್ಲಿ ತೀರ್ಪು ಋಣಿದಾರರ ವಿರುದ್ಧ ಎಚ್ಚರಿಕೆ ಪತ್ರವನ್ನು ಸಹ ಅಪೀಲು ನ್ಯಾಯಾಲಯಕ್ಕೆ ಸಲ್ಲಿಸಿದ್ದು, ಈ ಕಾರಣಕ್ಕಾಗಿ ಸದರಿ ಅಪೀಲಿನಲ್ಲಿ ಎಚ್ಚರಿಕೆ ಪತ್ರವಿರುವುದರಿಂದ ಅಪೀಲು ನ್ಯಾಯಾಲಯವು ಉಭಯಪಕ್ಷಕಾರರ ವಾದವನ್ನು ಆಲಿಸಿ ಸದರಿ ಮಧ್ಯಕಾಲೀಕ ಅರ್ಜಿಯನ್ನು ತೀರ್ಮಾನಿಸಬೇಕಾಗಿರುತ್ತದೆ. ಮುಂದುವರೆದು, ಸದರಿ ಅಸಲು ದಾವಾ ಸಂಖ್ಯೆ: 264/2015 ರ ತೀರ್ಪು ಮತ್ತು ಡಿಕ್ರಿಯ ಆದೇಶದ ವಿರುದ್ಧ ಅಪೀಲು ನ್ಯಾಯಾಲಯದಲ್ಲಿ ಅಪೀಲು ಇರುವುದರಿಂದ ಕಾರಣಕ್ಕಾಗಿ ಸದರಿ ಪ್ರಕರಣವು ಊರ್ಜಿತವಾಗತಕ್ಕದ್ದಲ್ಲ. ವಜಾಗೊಳ್ಳಲು ತಕ್ಕದ್ದಾಗಿರುತ್ತದೆ. ಮುಂದುವರೆದು ಈ ಅರ್ಜಿಯನ್ನು ತಿರಸ್ಕರಿಸಿದರೆ ಡಿಕ್ರಿದಾರರಿಗೆ ಯಾವುದೇ ರೀತಿಯ ಕಷ್ಟ-ನಷ್ಟ ಉಂಟಾಗುವುದಿಲ್ಲ. ಒಂದು ವೇಳೆ ಸದರಿ ಅರ್ಜಿಯನ್ನು ಪುರಸ್ಕರಿಸಿದ್ದರೆ ತೀರ್ಪು ಋಣಿದಾರರಕರಿಗೆ ತುಂಬಲಾರದ ಕಷ್ಟ-ನಷ್ಟ ಉಂಟಾಗುತ್ತದೆ. ಆದ್ದರಿಂದ ಅರ್ಜಿದಾರರು ಸಲ್ಲಿಸಿರುವ ಈ ಅರ್ಜಿಯನ್ನು ಖರ್ಚು ಸಮೇತ ವಜಾ ಮಾಡಬೇಕೆಂದು ಕೇಳಿಕೊಂಡಿರುತ್ತಾರೆ.

4. ಅರ್ಜಿದಾರಾರ ಮತ್ತು ಡಿಕ್ರಿದಾರರ ವಾದ ಮತ್ತು ತಕರಾರರನ್ನು ಕೇಳಲಾಯಿತು.

5. ಅರ್ಜಿದಾರರು/ತೀರ್ಪುಋಣಿದಾರರು ಆರ್.ಎ.ಸಂಖ್ಯೆ:85/202 ರ ಅಪೀಲು ಇತ್ಯರ್ಥವಾಗುವವರೆಗೂ ಅಮಲ್ಜಾರಿ ಸಂಖ್ಯೆ.32/2024 ನ್ನು ತಡೆ ಹಿಡಿಯಬೇಕೆಂದು ಕೇಳಿಕೊಂಡಿರುತ್ತಾರೆ. ತದ್ವಿರುದ್ಧವಾಗಿ ಸದರಿ ಮೇಲ್ಕಂಡ ಅರ್ಜಿಗೆ ಡಿಕ್ರಿದಾರರು ತಕರಾರನ್ನು

ಸಲ್ಲಿಸಿದ್ದು, ಸದರಿ ತಕರಾರಿನಲ್ಲಿ ಅರ್ಜಿದಾರರು ಸಲ್ಲಿಸಿರುವ ಅರ್ಜಿಯು ಮೇಲುನೋಟಕ್ಕೆ ಊರ್ಜಿತವಾಗತಕ್ಕದ್ದಲ್ಲ ಮತ್ತು ಸದರಿ ಅರ್ಜಿಯನ್ನು ವಜಾ ಮಾಡಕಬೇಕೆಂದು ಕೇಳಿಕೊಂಡಿರುತ್ತಾರೆ.

6. ಅರ್ಜಿಯ ಜೊತೆಗಿನ ದಾಖಲೆಗಳು ಮತ್ತು ಪ್ರಮಾಣ ಪತ್ರ ಮತ್ತು ತೀರ್ಪುಋಣಿದಾರರು ಮತ್ತು ಡಿಕ್ರಿದಾರರ ಸಲ್ಲಿಸಿದ ಆಕ್ಷೇಪಣೆಯನ್ನು ಪರಿಶೀಲಿಸಲಾಗಿದೆ. ಮುಂದುವರೆದು ಸದರಿ ತೀರ್ಪುಋಣಿದಾರರು ಸಲ್ಲಿಸಿರುವ ಅರ್ಜಿಯಲ್ಲಿ ಇದೇ ನ್ಯಾಯಾಲಯವು ಆದೇಶಿಸಿರುವ ಅಸಲು ದಾವ ಸಂಖ್ಯೆಃ264/2015 ರ ತೀರ್ಪು ಮತ್ತು ಡಿಕ್ರಿಯ ವಿರುದ್ಧ ಮಾನ್ಯ 3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಆರ್.ಎ ಸಂಖ್ಯೆಃ85/2023 ರಂತೆ ಅಪೀಲು ಸಲ್ಲಿಸಿರುವುದಾಗಿ ಹೇಳಿದ್ದು, ಸದರಿ ಅಪೀಲಿನಲ್ಲಿ ಈ ಪ್ರಕರಣದ ಡಿಕ್ರಿದಾರರು ಪ್ರತಿಅರ್ಜಿದಾರರಾಗಿದ್ದು, ಸದರಿ ಅಪೀಲಿಗೆ ಈ ಪ್ರಕರಣದ ಡಿಕ್ರಿದಾರರು ಅಪೀಲು ನ್ಯಾಯಾಲಯಕ್ಕೆ ವಕೀಲರ ಮೂಲಕ ಹಾಜರಾಗಿದ್ದು ಹಾಗೂ ಸದರಿ ಅಪೀಲಿಗೆ ಆಕ್ಷೇಪಣೆ ಸಲ್ಲಿಸಿರುತ್ತಾರೆಂದು ಪ್ರಮಾಣ ಪತ್ರದಲ್ಲಿ ನಮೂದಿಸಿರುತ್ತಾರೆ. ಮುಂದುವರೆದು ಸದರಿ ಅಂಶಗಳನ್ನು ಡಿಕ್ರಿದಾರರು ತಮ್ಮ ತಕರಾರಿನಲ್ಲಿ ಒಪ್ಪಿಕೊಂಡಿರುತ್ತಾರೆ. ಮುಂದುವರೆದು, ಈ ಹಂತದಲ್ಲಿ ಸದರಿ ತೀರ್ಪುಋಣಿದಾರರು ಈ ಪ್ರಕರಣದಲ್ಲಿ ಮುಂದಿನ ಹಂತವನ್ನು ನಡೆಯದಂತೆ ತಡೆಹಿಡಿಯಬೇಕೆಂದು ಕೋರಿ ಅರ್ಜಿ ಸಲ್ಲಿಸಿದ್ದು, ಇದಕ್ಕೆ ಪೂರಕವಾಗಿ ಅಪೀಲು ನ್ಯಾಯಾಲಯದಿಂದ ಈ ಪ್ರಕರಣವನ್ನು ಮುಂದಿನ ಆದೇಶ ಮಾಡದಂತೆ ಮಧ್ಯಂತರ ತಡೆಯಾಜ್ಞೆಯನ್ನು ನೀಡಿರುವ ಯಾವುದೇ ಸೂಕ್ತ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲವೆಂಬ ಅಂಶವು ನ್ಯಾಯಾಲಯಕ್ಕೆ ಕಂಡುಬಂದಿದ್ದು, ಈ ಅರ್ಜಿಯನ್ನು ಅನುಮತಿಸಲು ಅನರ್ಹವಾಗಿರುವುದರಿಂದ ಈ ಕೆಳಗಿನಂತೆಃ

## ಆದೇಶ

ಅರ್ಜಿದಾರರು ಸಲ್ಲಿಸಿದಮಧ್ಯಂತರ ಅರ್ಜಿ ಸಂಖ್ಯೆ.1 ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 21 ನಿಯಮ 29 ಸಹವಾಚಕ 151 ರಡಿ ಅರ್ಜಿಯನ್ನು ವಜಾಗೊಳಿಸಲಾಗಿದೆ.

**1** ನೇ ಅಪರ ಹಿರಿಯ ಸಿವಿಲ್ ಮತ್ತು ಜೆಎಂಎಫ್ ಸಿ ನ್ಯಾಯಾಧೀಶರು,
ರಾಮನಗರ.